# ಇದು ಗೊತ್ತಿಲ್ಲದ ರೋಮಾಂಚನ...

## ಹೋಗಿ ಬಂತು ಪ್ರಾಣ

**ಹರೆಯದ ಹುಡುಗ ಹುಡುಗಿಯರಿಗೆ ಪ್ರಣಯಪಾಠ ಕಲಿಸುವ ಶೃಂಗಾರದ ಹಾಡನ್ನು 'ಪಂಚತಂತ್ರ' ಬಳಗ ರೂಪಿಸಿದೆ. ಈ ಹಾಡು 'ಪಂಚತಂತ್ರ' ಚಿತ್ರದ ಆಮಂತ್ರಣ ಪತ್ರ ಎನ್ನುತ್ತಾರೆ ನಿರ್ದೇಶಕ ಯೋಗರಾಜ್ ಭಟ್.**

■ ಪದ್ಮನಾಭ





ಅದು ಬೆಂಗಳೂರಿನ ಮಿನರ್ವ ಮಿಲ್. ಮುರಿದ ಗೋಡೆಗಳು, ಕಲ್ಲು ಕಸ ಗಾಜಿನ ಚೂರುಗಳು ತುಂಬಿದ ನೆಲ. ಇಣುಕಿ ನೋಡುತ್ತಿರುವ ಮರಗಳು... ಈ ಅವ್ಯವಸ್ಥೆಯ ನಡುವೆಯೇ ಗಂಧರ್ವಲೋಕದ ತುಂಡೊಂದು ರಪಕ್ಕೆಂದು ನೆಲಕ್ಕೆ ಬಿದ್ದ ಹಾಗೆ ಬೆಳಕು–ಬಣ್ಣಗಳಿಂದ ಕಂಗೊಳಿಸುತ್ತಿದ್ದ ಪುಟ್ಟ ಜಾಗ. 'ಆ್ಯಕ್ಷನ್' ಎಂದಾಕ್ಷಣ ಗಂಧರ್ವಸೀಮೆಯ ಪ್ರಣಯಿಗಳಂಥ ಜೋಡಿ ಮೈಮರೆತು ನರ್ತಿಸಲು ಶುರುವಿಟ್ಟುಕೊಂಡಿತು. ಹಿನ್ನೆಲೆಯಲ್ಲಿ 'ಶೃಂಗಾರದ ಹೊಂಗೆಮರ ಹೂಬಿಟ್ಟಿದೆ' ಎಂಬ ಹಾಡು.

ನಾಯಕಿ ನೆಲಕ್ಕಿಂತ ಆಕಾಶದಲ್ಲಿ ಇರುತ್ತಿದ್ದುದೇ ಹೆಚ್ಚು. ಕಣ್ಣಲ್ಲೇ ಕೆಂಡಸಂಪಿಗೆ ಅರಳಿಸುತ್ತಿದ್ದವಳನ್ನು ನಾಯಕ ಹೂವಿನಷ್ಟೇ ಸರಾಗ ಎತ್ತಿ, ಗಿರಗಿರ ತಿರುಗಿಸಿ, ತಲೆಕೆಳಗಾಗಿಸಿ ಆಟವಾಡುತ್ತಿದ್ದ. ಈ ಆಟದಲ್ಲಿಯೇ ಒಮ್ಮೆ ನೆಲಕ್ಕೆ ಕಾಲುಕೊಟ್ಟ ಹುಡುಗಿ ಕುಸಿದು ಕೂತಳು. ನೋಡಿದರೆ ಕಾಲಿಗೆ ಕಲ್ಲು ತಾಗಿ ಗಾಯವಾಗಿ ರಕ್ತ ಸೋರುತ್ತಿದೆ. ಇಲ್ಲಿಗೆ ಪ್ರಣಯನೃತ್ಯದ ಪರಿಸಮಾಪ್ತಿ ಎಂದುಕೊಳ್ಳುತ್ತಿದ್ದವರ ಮುಖದಲ್ಲೆಲ್ಲ ಅಚ್ಚರಿಯ ಗೆರೆ ಏಳುವಂತೆ, ಆ ಹುಡುಗಿ ಗಾಯ ಒರೆಸಿಕೊಂಡು ಎದ್ದುನಿಂತಳು. ಮುಖದಲ್ಲಿನ ಸೇವಂತಿಹೂವಂಥ ನಗು ಕೊಂಚವೂ ಮಾಸಿರಲಿಲ್ಲ. ನೃತ್ಯ ಮತ್ತೆ ಮೊದಲಿನಷ್ಟೇ ಸರಾಗವಾಗಿ ಮುಂದುವರಿಯಿತು. ನಿರ್ದೇಶಕರು 'ಕಟ್' ಎಂದು ಹೇಳುವವರೆಗೂ... ಕಟ್ ಎಂದಾಗ ಆ ನೃತ್ಯಜೋಡಿಯ ಮುಖದಲ್ಲೊಂದು ಸಣ್ಣ ಆತಂಕ, ಮತ್ತಷ್ಟೇ ನಿರೀಕ್ಷೆ....

ನೃತ್ಯ ನಿರ್ದೇಶಕ ಇಮ್ರಾನ್ ಸರ್ದಾರಿಯಾ ತಮ್ಮ ಟೋಪಿ ತೆಗೆದು ಮುಗುಳ್ನಕ್ಕಾಗ ಕ್ಯಾಮೆರಾ ಮುಂದೆ ನಿಂತಿದ್ದ ನಾಯಕ–ನಾಯಕಿ ಮುಖದಲ್ಲಿ ನಿರಾಳ ಭಾವ.

'ಪಂಚತಂತ್ರ'ದ ಈ ಹಾಡನ್ನು ಎಷ್ಟು ಸಾಧ್ಯವೋ ಅಷ್ಟು ಅದ್ಭುತವಾಗಿ ಚಿತ್ರೀಕರಿಸಿಕೊಳ್ಳಬೇಕು ಎಂಬ ನಿರ್ದೇಶಕ ಯೋಗರಾಜ ಭಟ್ ಹವಣಿಕೆಯಯನ್ನು ನೃತ್ಯನಿರ್ದೇಶಕ ಇಮ್ರಾನ್ ಸರ್ದಾರಿಯಾ ಸವಾಲಾಗಿ ಸ್ವೀಕರಿಸಿದ್ದರು. ಅಪರೂಪದ – ಅಷ್ಟೇ ಸವಾಲಿನ ನೃತ್ಯ ಪ್ರಕಾರಗಳನ್ನೆಲ್ಲ ಜೋಡಿಸಿ ಸಂಯೋಜಿಸಿದ್ದರು. ತಮ್ಮ ಕಲ್ಪನೆಯ ಸಂಯೋಜನೆಗೆ ವಿಹಾನ್ ಮತ್ತು ಸೋನಲ್ ಮೊಂತೆರೊ ಜೀವ ತುಂಬಬಲ್ಲರಾ ಎಂಬ ಆತಂಕವೂ ಅವರಿಗಿತ್ತು. ಅದಕ್ಕಾಗಿಯೇ ಚಿತ್ರೀಕರಣಕ್ಕೆ ಎರಡು ತಿಂಗಳ ಮುಂಚಿನಿಂದ ತಾಲೀಮಿಗೆ ಕರೆದಿದ್ದರು.

ದಿನಕ್ಕೆ ನಾಲ್ಕು ತಾಸು ತಾಲೀಮು. ಬೆಳಿಗ್ಗೆ ತಿಂಡಿ ತಿನ್ನದೇ ಬರಬೇಕು. ತುಂಬಿದ ಹೊಟ್ಟೆಯಲ್ಲಿ ತಲೆಕೆಳಗು ಭಂಗಿಗಳನ್ನೆಲ್ಲ ಮಾಡಹೊರಟರೆ ತಿಂದಿದ್ದೆಲ್ಲ ಹೊರಬರುವುದು ಗ್ಯಾರಂಟಿ. ತೀರಾ ಹಸಿದಾಗ ಸೋನಲ್ ತಿನಿಸಿನ ಬಟ್ಟಲಿಗೆ ಕೈ ಹಾಕಿದರೆ ಎಲ್ಲಿದ್ದರೂ ವಿಹಾನ್ ತಕ್ಷಣ ಪ್ರತ್ಯಕ್ಷ! 'ನೀನು ಹೊಟ್ಟೆ ತುಂಬ ತಿಂದರೆ ನಿನ್ನ ಭಾರ ಹೊರಬೇಕಾದವನು ನಾನು' ಎನ್ನುವುದು ಅವರ ಆರೋಪ. ತಾಲೀಮನ ಸಮಯದಲ್ಲಿ ಅರ್ಧಗಂಟೆಯಲ್ಲಿ ಸುಮಾರು 15–20 ಬಾರಿ ಸೋನಲ್ ಅವರನ್ನು ವಿಹಾನ್ ಎತ್ತಿಹಿಡಿಯಬೇಕಾಗಿತ್ತಂತೆ. ನಾಲ್ಕುಗಂಟೆಯಲ್ಲಿ ಸುಮಾರು ನೂರೈವತ್ತು ಸಾರಿ! ಪ್ರಣಯಗೀತೆಯ ದೃಶ್ಯಗಳಲ್ಲಿ ನಟಿಸಿದ ಅನುಭವದ ಕುರಿತು ಯಾರಾದರೂ ಪ್ರಶ್ನಿಸಿದರೆ ವಿಹಾನ್ ಮತ್ತು ಸೋನಲ್ ಇಬ್ಬರದೂ ಒಂದೇ ಗುನುಗು: 'ಇದು ಗೊತ್ತಿಲ್ಲದ ರೋಮಾಂಚನ/ ಹೋಗಿ ಬಂತು ಪ್ರಾಣ'. ■

★ ಚಿತ್ರಗಳು: ಕೆ.ಎನ್. ನಾಗೇಶ್‌ಕುಮಾರ್